# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 19.09.2011**

## ***ಪುಲಿಕೇಶಿನಗರ ವಿಭಾಗದಲ್ಲಿ ರಸ್ತೆ ಗುಂಡಿ ಮುಚ್ಚುವ ಕಾರ್ಯ ಪ್ರಗತಿ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ ವಲಯದ ಪುಲಿಕೇಶಿನಗರ ವಿಭಾಗದ ವಾರ್ಡ್ ನಂ.78, ಪುಲಿಕೇಶಿನಗರ ವಾರ್ಡ್‌ನ ಮುಖ್ಯರಸ್ತೆಗಳಾದ ಮಾಸ್ಕ್ ರಸ್ತೆ, ಎಂ.ಎಂ. ರಸ್ತೆ, ಹೆನ್ಸ್ ರಸ್ತೆ, ನೇತಾಜಿ ರಸ್ತೆಗಳು, ವಾರ್ಡ್ ನಂ.61, ಎಸ್.ಕೆ. ಗಾರ್ಡನ್ ವಾರ್ಡ್‌ನ ಮುಖ್ಯರಸ್ತೆಗಳಾದ ಟ್ಯಾನರಿ ರಸ್ತೆ, ಎಸ್.ಕೆ. ಗಾರ್ಡನ್ ಮುಖ್ಯರಸ್ತೆ, ಡಿ.ಜೆ. ಹಳ್ಳಿ ಮುಖ್ಯರಸ್ತೆ, ಬೋರ್‌ಬ್ಯಾಂಕ್ ರಸ್ತೆಗಳು, ವಾರ್ಡ್ ನಂ.31, ಕುಶಾಲನಗರ ವಾರ್ಡ್‌ನಲ್ಲಿ ಟ್ಯಾನರಿ ರಸ್ತೆ ಹಾಗೂ ವಾರ್ಡ್ ನಂ.32, ಕಾವಲ್ ಭೈರಸಂದ್ರ ವಾರ್ಡ್‌ನ ಕಾವಲ್ ಭೈರಸಂದ್ರ ರಸ್ತೆ, ಸುಲ್ತಾನ್‌ಪಾಳ್ಯ ರಸ್ತೆ, ಕೆ.ಹೆಚ್.ಬಿ. ರಸ್ತೆ ಎಂಬ ಮುಖ್ಯರಸ್ತೆಗಳಿದ್ದು, ಈ ರಸ್ತೆಗಳಲ್ಲಿ ಮಳೆಯಿಂದ ಸುಮಾರು 950 ರಸ್ತೆಗುಂಡಿಗಳು ಬಿದ್ದಿದ್ದು, ದಿನಾಂಕ: 12.09.2011 ರಿಂದ ರಸ್ತೆಗುಂಡಿ ಮುಚ್ಚುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಪ್ರತಿದಿನ ಸುಮಾರು 125 ರಿಂದ 150 ರಸ್ತೆಗುಂಡಿಗಳನ್ನು ಮುಚ್ಚುವ ಕಾರ್ಯವು ನಡೆಯುತ್ತಿದ್ದು, ಇದುವರೆಗೂ ಸುಮಾರು 765 ರಸ್ತೆಗುಂಡಿಗಳನ್ನು ಮುಚ್ಚಲಾಗಿದೆ. ಉಳಿದ ರಸ್ತೆಗುಂಡಿಗಳನ್ನು ಮುಚ್ಚುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಇನ್ನೂ 2-3 ದಿನಗಳಲ್ಲಿ ಉಳಿದ ಎಲ್ಲಾ ಗುಂಡಿಗಳನ್ನು ಮುಚ್ಚಲಾಗುವುದು ಎಂದು ಕಾರ್ಯಪಾಲಕ ಅಭಿಯಂತರರಾದ ಶ್ರೀ ಡಿ.ಆರ್. ರಾಮದಾಸ್ ರವರು ತಿಳಿಸಿದ್ದಾರೆ. ಈ ರಸ್ತೆಗಳಲ್ಲಿರುವ ರಸ್ತೆ ಗುಂಡಿಗೆ ಸಂಬಂಧಿಸಿದಂತೆ ಯಾವುದೇ ದೂರುಗಳಿದ್ದಲ್ಲಿ ಸದರಿಯವರ ದೂರವಾಣಿ ಸಂಖ್ಯೆ: 9480685220 ಸಂಪರ್ಕಿಸಲು ಸಾರ್ವಜನಿಕರಲ್ಲಿ ಕೋರಲಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 19.09.2011**

ಕನ್ನಡದ ಹಿರಿಯ ಸಾಹಿತಿಗಳಾದ ಡಾ|| ಚಂದ್ರಶೇಖರ್ ಕಂಬಾರ್ ರವರಿಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ ಅವರ ಸಮಗ್ರ ಸಾಹಿತ್ಯಕ್ಕಾಗಿ ಇಂದು ಕೇಂದ್ರ ಸರ್ಕಾರವು ಜ್ಞಾನಪೀಠ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆಂದು ಘೋಷಿಸಿ, ಗೌರವಿಸಿದೆ. ಇವರು ಕರ್ನಾಟಕದ 8ನೇ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಈ ಸಂದರ್ಭದಲ್ಲಿ ಪೂಜ್ಯ ಮಹಾಪೌರರಾದ ಶ್ರೀಮತಿ ಶಾರದಮ್ಮ, ಉಪ ಮಹಾಪೌರರಾದ ಶ್ರೀ ಎಸ್. ಹರೀಶ್, ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಆರ್. ನಂಜುಂಡಪ್ಪ ರವರು ಇವರಿಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**